
# ನಿಮ್ಮ ಹಣಕಾಸು ಖಾತೆಯನ್ನು ಸುರಕ್ಷಿತವಾಗಿ ಬಳಸಿ

ನಿಮಗೆ ಮಾತ್ರ ಗೊತ್ತಿರುವ ಪಿನ್ ನಂಬರ್ ನ್ನು ಆರಿಸಿ




ನಿಮ್ಮ ಪಿನ್ ನಂಬರ್ ನ್ನು ಯಾವಾಗಲೂ ರಹಸ್ಯವಾಗಿಡಿ




ನಿಮ್ಮ ಪಿನ್ ನಂಬರ್ ನ್ನು ಎಂದಿಗೂ ಹಂಚಿಕೊಳ್ಳಬೇಡಿ

ವಂಚನೆ/ಮೋಸದ ಕರೆಗಳ ಬಗ್ಗೆ ಎಚ್ಚರವಿರಲಿ




ನಿಮ್ಮ ಪಿನ್ ಸಂಖ್ಯೆಯನ್ನು ಕೇಳಲು ಯಾರಾದರೂ, ಫೋನ್ ಮಾಡಿದರೆ ನಿಮ್ಮ ಬ್ಯಾಂಕಿನಿಂದ ಎಂದು ಹೇಳಿದ್ದರೂ ಸಹ ಸ್ವಲ್ಪ ಕಾಯಿರಿ

ನನ್ನ ಬ್ಯಾಂಕ್ ಖಾತೆಯನ್ನು ಸುರಕ್ಷಿತವಾಗಿರಿಸಲು ನಾನು ನನ್ನ ಪಿನ್ ನಂಬರ್ ಅಥವಾ ಪಾಸ್‌ವರ್ಡ್ ನ್ನು ಯಾರೊಂದಿಗೂ ಹಂಚಿಕೊಳ್ಳುವುದಿಲ್ಲ



RISE


# ನಿಮಗಾಗಿ ಇರುವ ಹಣಕಾಸು ಸೇವೆಗಳು

## ಡಿಜಿಟಲ್ ಖಾತೆ ಎಂದರೆ


### ಸುರಕ್ಷಿತ ಮತ್ತು ಸುಲಭ

- ನಿಮ್ಮ ಫೋನ್‌ನಲ್ಲೇ ನಿಮ್ಮ ಬ್ಯಾಂಕ್ ಖಾತೆಯನ್ನು ನೀವು ಪಡೆಯಬಹುದು
- ನೀವು ಡೆಬಿಟ್ ಕಾರ್ಡ್ ಬಳಸಬಹುದು
- ನೀವು ಯಾವಾಗ ಬೇಕಾದರೂ ನಿಮ್ಮ ಹಣವನ್ನು ತೆಗೆದುಕೊಳ್ಳಬಹುದು
- ನಿಮ್ಮ ಹಣವನ್ನು ನೀವು ಬ್ಯಾಂಕಿನಲ್ಲಿ ಸುರಕ್ಷಿತವಾಗಿರಿಸಿಕೊಳ್ಳಬಹುದು

### ಅನುಕೂಲಗಳು




ಹಣವನ್ನು ಕಳುಹಿಸಲು



ಬಿಲ್ ಪಾವತಿಸಲು




ವ್ಯಾಪಾರಿಗಳಿಗೆ ಪಾವತಿಸಲು



ಮೊಬೈಲ್ ರೀಚಾರ್ಜ್ ಮಾಡಲು


- ನಿಮ್ಮ ಖಾತೆಯಲ್ಲಿ, ನೀವು ಪ್ರತಿ ತಿಂಗಳು ನಿಮ್ಮ ಆದಾಯ ಮತ್ತು ನಿಮ್ಮ ಖರ್ಚುಗಳನ್ನು ತಿಳಿದುಕೊಳ್ಳಬಹುದು ಮತ್ತು ನಿಮ್ಮ ವೇತನದ ಮೇಲೆ ನಿಯಂತ್ರಣವನ್ನು ಹೊಂದಬಹುದು
- ಶುಲ್ಕಗಳು ಮತ್ತು ಬ್ಯಾಂಕ್ ಖಾತೆಯ ಮಿತಿಗಳು ಏನೆಂದು ನಿಮಗೆ ತಿಳಿದಿದೆಯೆ ಎಂದು ಖಚಿತಪಡಿಸಿಕೊಳ್ಳಿ
- ನಿಮಗೆ ಯಾವುದೇ ಸಮಸ್ಯೆಗಳಿದ್ದರೆ, ನಿಮ್ಮ ಕಾರ್ಖಾನೆ ವ್ಯವಸ್ಥಾಪಕರನ್ನು ಸಂಪರ್ಕಿಸಿ ಅಥವಾ ನಿಮ್ಮ ಹಣಕಾಸು ಸೇವಾ ಪೂರೈಕೆದಾರರಿಗೆ ಫೋನ್ ಮಾಡಿ

ನನ್ನ ಫೋನ್ ಸಂಖ್ಯೆ ನನ್ನ ಬ್ಯಾಂಕ್ ಖಾತೆಗೆ ಲಿಂಕ್ ಆಗಿರುವುದರಿಂದ ನನ್ನ ಆದಾಯ ಮತ್ತು ವೆಚ್ಚಗಳನ್ನು ನಾನು ತಿಳಿಯಬಹುದು. USSD *99# ಮತ್ತು UPI ಯುಪಿಐ ಪಾವತಿಗಳನ್ನು ಬಳಸಿಕೊಂಡು ಹಣವನ್ನು ಮನೆಗೆ ಕಳುಹಿಸಲು ಅನುಕೂಲವಾಗಿದೆ



# ಹಣಕಾಸಿನ ಯೋಜನೆ

## ನಿಮ್ಮ ಹಣಕಾಸಿನ ಗುರಿಗಳೇನು?





### ಉತ್ತಮ ಸಲಹೆ

ನಿಮ್ಮ ಗುರಿಗಳನ್ನು ಕುಟುಂಬದೊಂದಿಗೆ ಚರ್ಚಿಸಿ ಮತ್ತು ನೀವು ಎಷ್ಟು ಉಳಿತಾಯ ಮಾಡಬೇಕು ಎಂಬುದನ್ನು ಒಪ್ಪಿಕೊಳ್ಳಿ

ನಿಮ್ಮ ಗುರಿಗಳನ್ನು ತಲುಪಲು ಡಿಜಟಲ್ ಖಾತೆಯಲ್ಲಿ ಉಳಿತಾಯವನ್ನು ಪ್ರಾರಂಭಿಸಿ ಮತ್ತು ನಿಮ್ಮ ಖರ್ಚನ್ನು ಮೇಲ್ವಿಚಾರಣೆ ಮಾಡಲು ಜಮಾ ಖರ್ಚನ್ನು ಪರಿಶೀಲಿಸಿ

ನನ್ನ ಮಗಳು ಕಾಲೇಜಿಗೆ ಹೋಗುವುದು ನನ್ನ ಗುರಿ. ನನ್ನ ಹಳ್ಳಿಯಲ್ಲಿ ಸ್ವಲ್ಪ ಕೃಷಿ ಭೂಮಿಯನ್ನು ಸಹ ಖರೀದಿಸಲು ನಾನು ಬಯಸುತ್ತೇನೆ. ನಮ್ಮ ಗುರಿಗಳನ್ನು ತಲುಪಲು ನಾವು ಪ್ರತಿ ತಿಂಗಳು ಎಷ್ಟು ಉಳಿತಾಯ ಮಾಡಬೇಕೆಂದು ನನ್ನ ಕುಟುಂಬದೊಂದಿಗೆ ಯೋಜನೆ ಮಾಡಿದ್ದೇನೆ



# ಬಜೆಟ್ ಮಾಡುವುದು ಹೇಗೆ

| | ವಿಷಯ | ಮೊತ್ತ |
|---|---|---|
| ಆದಾಯ | **ವೇತನ**<br>ನಿಮ್ಮ ವೇತನ<br>ನಿಮ್ಮ ಸಂಗಾತಿಯ ವೇತನ<br>**ಇತರೆ ಆದಾಯ**<br>ಕೃಷಿ ಆದಾಯ | |
| ವೆಚ್ಚಗಳು | **ಅಗತ್ಯಗಳು**<br>ಆರೋಗ್ಯಕರ ಆಹಾರ<br>ಬಾಡಿಗೆ<br>ಬಿಲ್ ಗಳು<br>ಔಷಧಿ<br>ಶಾಲಾ ಶುಲ್ಕ<br>**ಅನಗತ್ಯ ವಸ್ತುಗಳು**<br>ತಿನಿಸು ಮತ್ತು ಸಿಹಿತಿಂಡಿಗಳು<br>ಹೊಸ ಬಟ್ಟೆಗಳು | |
| ಸಮತೋಲನ | ಆದಾಯದಿಂದ ವೆಚ್ಚವನ್ನು ಕಳೆಯುವುದು | |

ಉಳಿದ ಹಣ = ನಿಮ್ಮ ಉಳಿತಾಯ

## ಉತ್ತಮ ಸಲಹೆ

ನಿಮ್ಮ ಕುಟುಂಬದೊಂದಿಗೆ ಬಜೆಟ್ ರಚಿಸಿ. ಅಗತ್ಯ ವೆಚ್ಚಗಳತ್ತ ಗಮನಹರಿಸಿ ಮತ್ತು ಅಗತ್ಯವಲ್ಲದ ವಸ್ತುಗಳನ್ನು ಕಡಿಮೆ ಮಾಡಿ


ನಿಮ್ಮ ಉಳಿತಾಯವನ್ನು ನಿಮ್ಮ ಹಣಕಾಸು ಖಾತೆಯಲ್ಲಿ ಇರಿಸಿ




ನಿಮ್ಮ ಅಗತ್ಯ ವೆಚ್ಚಕ್ಕೆ ಆದ್ಯತೆ ನೀಡುವುದು



ಅಗತ್ಯವಲ್ಲದ ವೆಚ್ಚಗಳನ್ನು ಕಡಿಮೆ ಮಾಡಿ



RISE

# ಪ್ರತಿಯೊಬ್ಬರೂ ಉಳಿಸಬಹುದು, ಇಂದೇ ಪ್ರಾರಂಭಿಸಿ!

**ನೀವು ಏಕೆ ಉಳಿಸಬೇಕು**



- ನಿಮ್ಮ ಗುರಿಗಳನ್ನು ತಲುಪಲು
- ತುರ್ತು ಸಂದರ್ಭಗಳಲ್ಲಿ

**ಉಳಿತಾಯ ಮಾಡುವುದು ಹೇಗೆ**




- ಎಷ್ಟು ಉಳಿಸಬೇಕೆಂದು ನಿರ್ಧರಿಸಿ ಮತ್ತು ಅದಕ್ಕೆ ಬದ್ಧರಾಗಿರಿ
- ನಿಮಗೆ ಅಗತ್ಯವಿದ್ದಷ್ಟು ಹಣವನ್ನು ಖರ್ಚು ಮಾಡಿ, ಉಳಿದ ಹಣವನ್ನು ನಿಮ್ಮ ಖಾತೆಯಲ್ಲಿ ಸುರಕ್ಷಿತವಾಗಿರಿಸಿ

**ನಿಮ್ಮ ಹಣವನ್ನು ಸುರಕ್ಷಿತವಾಗಿರಿಸಿ**



- ಉಳಿತಾಯ ಖಾತೆಯನ್ನು ತೆರೆಯಿರಿ ಮತ್ತು ಬಳಸಿ




## ಜವಾಬ್ದಾರಿಯುತ ಸಾಲಗಳು

- ಸಾಲವನ್ನು ತೆಗೆದುಕೊಳ್ಳುವ ಬದಲು ದೊಡ್ಡ ಖರ್ಚಿಗಾಗಿ ಉಳಿತಾಯ ಮಾಡುವುದು ಉತ್ತಮ
- ನೀವು ನಿಜವಾಗಿಯೂ ಸಾಲ ತೆಗೆದುಕೊಳ್ಳುವ ಅಗತ್ಯವಿದ್ದರೆ ಬ್ಯಾಂಕುಗಳಂತಹ ಪ್ರತಿಷ್ಠಿತ ಮೂಲಗಳಿಂದ ಮಾತ್ರ ತೆಗೆದುಕೊಳ್ಳಿ
- ನೀವು ಸಾಲದ ಮರು ಪಾವತಿಯನ್ನು ತಪ್ಪಿಸಿಕೊಂಡರೆ ಅದು ನಿಮಗೆ ಹೆಚ್ಚು ಹೊರೆಯಾಗುತ್ತದೆ
- ಸಾಲದ ಬಡ್ಡಿದರ ಮತ್ತು ಇತರ ಬದಲಾವಣೆಗಳು ಏನೆಂದು ತಿಳಿದುಕೊಳ್ಳಿ

# ನಿಮ್ಮ ಕುಟುಂಬದೊಂದಿಗೆ ಹಣಕಾಸಿನ ಬಗ್ಗೆ ಮಾತನಾಡುವುದು

ಹಣಕಾಸಿನ ಬಗ್ಗೆ ಒಟ್ಟಾಗಿ ಕುರಿತು ಚರ್ಚಿಸುವ ಕುಟುಂಬಗಳು ತಮ್ಮ ಹಣಕಾಸಿನ ಗುರಿಗಳನ್ನು ಪೂರೈಸುವ ಸಾಧ್ಯತೆ ಹೆಚ್ಚು ಮತ್ತು ಹೆಚ್ಚು ಸಾಮರಸ್ಯದ ಸಂಬಂಧವನ್ನು ಹೊಂದಿರುತ್ತಾರೆ

## ಮಾತನಾಡಲು ಸಲಹೆಗಳು

- ಅವನ ಅಥವಾ ಅವಳ ದೃಷ್ಟಿಕೋನವನ್ನು ಒಪ್ಪಿಕೊಳ್ಳಿ
- ನಿಮ್ಮ ಸಂಗಾತಿ ಹೇಳಿದ್ದನ್ನು ಆಲಿಸಿ
- ಸಾಮಾನ್ಯ ಪರಿಹಾರವನ್ನು ಕಂಡುಹಿಡಿಯಲು ರಾಜಿ ಮಾಡಿಕೊಳ್ಳಿ
- ನಿಮ್ಮ ಸ್ಥಾನವನ್ನು ಆತ್ಮವಿಶ್ವಾಸದಿಂದ ತಿಳಿಸಿ
- ಉತ್ತಮ ಕಣ್ಣಿನ ಸಂಪರ್ಕವನ್ನು ಹೊಂದಿರಿ
- ಇತರ ಸಮಸ್ಯೆಗಳನ್ನು ಸಂಭಾಷಣೆಯ ನಡುವೆ ತರಬೇಡಿ

ನಾವು ಹಣದ ಬಗ್ಗೆ ಸಾಕಷ್ಟು ವಾದ ಮಾಡುತ್ತಿದ್ದೆವು, ಆದರೆ ನಾವು ನಮ್ಮ ಗುರಿಗಳನ್ನು ಜೋಡಿಸಿ ಒಟ್ಟಿಗೆ ಬಜೆಟ್ ಮಾಡಲು ಪ್ರಾರಂಭಿಸಿದಾಗಿನಿಂದ, ಮನೆಯಲ್ಲಿ ನಾವು ಉತ್ತಮ ಸಂಬಂಧಗಳನ್ನು ಹೊಂದಿದ್ದೇವೆ



ನೀವು ಮನೆಯಲ್ಲಿ ಸಂಘರ್ಷ ಅಥವಾ ಹಿಂಸಾಚಾರವನ್ನು ಎದುರಿಸುತ್ತಿದ್ದರೆ: ದಯವಿಟ್ಟು ಪೊಲೀಸ್ ಸಹಾಯಕ್ಕಾಗಿ 100 ಗೆ ಕರೆ ಮಾಡಿ, ಅಥವಾ ಮಹಿಳೆಯರ ಮೇಲಿನ ದೌರ್ಜನ್ಯಕ್ಕಾಗಿ 1091 ಅಥವಾ 181 ಗೆ ಕರೆ ಮಾಡಿ

# ಇಂಟರ್ನೆಟ್ ಇಲ್ಲದೆ ಮೊಬೈಲ್ ಬ್ಯಾಂಕಿಂಗ್

ಯು ಎಸ್ ಎಸ್ ಡಿ ಸೇವೆಗಳು *99# ನ್ನು ಡಯಲ್ ಮಾಡಿ

## ಟೆಲಿಕಾಂ ಸಂಪರ್ಕ ಸೇವೆಯನ್ನು ಹೊಂದಿದ ಯಾವುದೇ ಮೊಬೈಲ್ ಫೋನ್ ಬಳಸಿ

ಕೀ ಪ್ಯಾಡ್ ಫೋನ್

ಸ್ಮಾರ್ಟ್ ಫೋನ್

ಇಂಟರ್ನೆಟ್ ನ ಅವಶ್ಯಕತೆ ಇಲ್ಲ

## ನಿಮಗೆ ಬೇಕಾಗಿರುವುದು

ಮೊಬೈಲ್ ನೆಟ್‌ವರ್ಕ್ ಸೇವೆಯಲ್ಲಿ ನೋಂದಾಯಿತ/ರಿಜಿಸ್ಟರ್ ಆಗಿರುವ ಸಿಮ್

ನಿಮ್ಮ ಮೊಬೈಲ್ ನಂಬರ್ ನ್ನು ನಿಮ್ಮ ಬ್ಯಾಂಕ್ ಖಾತೆಗೆ ಲಿಂಕ್ ಮಾಡಿರಬೇಕು

ನಿಮ್ಮ ಬ್ಯಾಂಕ್ ಖಾತೆಯ ಡೆಬಿಟ್ ಕಾರ್ಡ್

## ಯುಎಸ್ಎಸ್ ಡಿ ಪ್ರಯೋಜನಗಳು ಮತ್ತು ಸೇವೆಗಳು

ಹಣ ಕಳುಹಿಸಲು

ಹಣವನ್ನು ಸ್ವೀಕರಿಸಲು

ಬಾಕಿ ಇರುವ ಪಾವತಿಯನ್ನು ಚೆಕ್ ಮಾಡಲು

ನಿಮ್ಮ ಖಾತೆಯಲ್ಲಿ ಉಳಿದಿರುವ ಹಣವನ್ನು ಮತ್ತು ನಿಮ್ಮ ಕೊನೆಯ 5 ವಹಿವಾಟುಗಳನ್ನು ಪರಿಶೀಲಿಸಲು

UPI UNIFIED PAYMENTS INTERFACE

ಅಗತ್ಯವಿದ್ದರೆ ನಿಮ್ಮ ಯುಪಿಐ ಪಿನ್ ನಂಬರ್ ನ್ನು ಬದಲಾಯಿಸಬಹುದು

## ಯುಎಸ್ ಎಸ್ ಡಿ ಸೇವೆಗಳ ನೋಂದಾವಣೆಯನ್ನು ಈ ಪ್ರಕಾರ ಮಾಡಿ

ನೋಂದಾಯಿತ ಮೊಬೈಲ್ ನಂಬರ್ ನಿಂದ ***99#** ನ್ನು ಡಯಲ್ ಮಾಡಿ

ಮೆನುವಿನಿಂದ ನಿಮ್ಮ ಬ್ಯಾಂಕ್ ನ್ನು ಆಯ್ಕೆ ಮಾಡಿ

ನಿಮ್ಮ ಬ್ಯಾಂಕ್ ಖಾತೆಯನ್ನು ಪಟ್ಟಿಯಿಂದ ಆಯ್ಕೆ ಮಾಡಿ

ನಿಮ್ಮ ಯುಪಿಐ ಐಡಿ ಪಿನ್ ನ್ನು ಸೆಟ್ ಮಾಡಿರಿ :

UPI UNIFIED PAYMENTS INTERFACE

ಎ) ನಿಮ್ಮ ಡೆಬಿಟ್ ಕಾರ್ಡ್ ನ ಮುಂಭಾಗದಲ್ಲಿರುವ ಕೊನೆಯ 6 ಅಂಕಿಗಳನ್ನು ನಮೂದಿಸಿ

ಬಿ) ಮುಕ್ತಾಯ ದಿನಾಂಕವನ್ನು ನಮೂದಿಸಿ

ಸಿ) ನಿಮ್ಮ ಪಿನ್ ಸಂಖ್ಯೆಯನ್ನು ನಮೂದಿಸಿ ದೃಢೀಕರಿಸಿ

ಯು ಸ್ ಸ್ ಡಿ (USSD) ಸೇವೆಗಳನ್ನು ಬಳಸಲು *99# ನ್ನು ಮತ್ತೊಮ್ಮೆ ಡಯಲ್ ಮಾಡಿ

ನಿಮ್ಮ ಟೆಲಿಕಾಂ ಸೇವೆಯನ್ನು ಒದಗಿಸುವವರು USSD ಸೇವೆಯನ್ನು ಬಳಸುವುದಕ್ಕಾಗಿ ಪ್ರತಿ ವಹಿವಾಟಿಗೆ 0.50 ಪೈಸೆ ಯನ್ನು ಚಾರ್ಜ್ ಮಾಡುವರು

ಒಂದು ಬಾರಿ ಗೆ 5000 ರೂಪಾಯಿ ಮತ್ತು ವರ್ಷಕ್ಕೆ 50,000 ರೂಪಾಯಿಯ ತನಕ ವಹಿವಾಟನ್ನು ಮಾಡಬಹುದು

RISE